# ಲೈನ್ ಡ್ಯೂಡ್!

■ ಪ್ರವೀಣ ಕುಲಕರ್ಣಿ

ಭಾರತೀಯರಾದ ನಮಗೆ ಸರದಿಯಲ್ಲಿ ಕಾಯುವುದು ಹೊಸತೇನೂ ಅಲ್ಲ. ಹನುಮನ ಬಾಲದಂತೆ ಉದ್ದುದ್ದ ಬೆಳೆಯುತ್ತಾ ಹೋಗುವ ಎಷ್ಟು ಸರದಿಗಳನ್ನು ನೋಡಿಲ್ಲ ನಾವು? ಗಂಟೆಗಟ್ಟಲೆ, ದಿನಗಟ್ಟಲೆ ಸರದಿಯಲ್ಲಿ ನಿಂತು, ಕೊನೆಗೆ ‘ನಾಳೆ ಬಾ’ ಅಂತ ಹೇಳಿಸಿಕೊಂಡ ಸಾಹಸಿಗರೂ ನಾವಲ್ಲವೇ? ರೇಷನ್ ಪಡೆಯಲು, ಪೆನ್ಶನ್ ತೆಗೆದುಕೊಳ್ಳಲು, ಇಂಜೆಕ್ಷನ್ ಹಾಕಿಸಿಕೊಳ್ಳಲು, ನೀರು ತುಂಬಿಸಿಕೊಳ್ಳಲು, ಪಾಸ್ ಪಡೆಯಲು ಎಲ್ಲದಕ್ಕೂ ಸರದಿಯಲ್ಲಿ ನಿಂತು ಬೆವರು ಹರಿಸಲೇಬೇಕು. ಲಾಗಾಯ್ತಿನಿಂದ ಭಾರತೀಯರನ್ನು ಕಾಡುತ್ತಿದ್ದ ಈ ಸಮಸ್ಯೆ, ಕಳೆದ ಒಂದು ದಶಕದಿಂದ ಅಮೆರಿಕನ್ನರನ್ನೂ ಬಲವಾಗಿ ಕಾಡಿದೆ. ನ್ಯೂಯಾರ್ಕ್‌ನಲ್ಲಿ ಸರದಿಯಲ್ಲಿ ಕಾಯುವ ಈ ತಾಪತ್ರಯ ಎಷ್ಟೊಂದು ಹೆಚ್ಚಾಗಿದೆ ಎಂದರೆ ದುಡ್ಡು ಕೊಟ್ಟರೆ ನಿಮ್ಮ ಪರವಾಗಿ ದಿನಗಟ್ಟಲೆ ಕಾಯುವವರ ಪಡೆಯೇ ಹುಟ್ಟಿಕೊಂಡಿದೆ. ಅಂದಹಾಗೆ, ಆ ಪಡೆಯ ಹೆಸರು ‘ಸೇಮ್ ಓಲೆ ಲೈನ್ ಡ್ಯೂಡ್ಸ್’ (SOLD) ಎಂದು. ಈ ಕಂಪನಿಯನ್ನು ಕಟ್ಟಿ ಬೆಳೆಸಿದವ ರಾಬರ್ಟ್ ಸ್ಯಾಮ್ಯುವೆಲ್ ಎಂಬ ಒಂದುಕಾಲದ ನಿರುದ್ಯೋಗಿ!

ನ್ಯೂಯಾರ್ಕ್‌ನಲ್ಲಿ ತುಂಬಾ ಬ್ಯುಸಿ ಆಗಿರುತ್ತಿದ್ದ ಶ್ರೀಮಂತರು ಐಫೋನ್‌ನ ಹೊಸ ಆವೃತ್ತಿಯ ಸೆಟ್‌ಗಳಿಗಾಗಿ, ಹ್ಯಾಮಿಲ್ಟನ್, ಸ್ಯಾಟರ್‌ಡೇ ಶೋಗಳಿಗಾಗಿ, ಬಗೆಬಗೆಯ ಶೂಗಳಿಗಾಗಿ ಲೊಚಗುಡುತ್ತಾ ಸರದಿಯಲ್ಲಿ ನಿಲ್ಲುತ್ತಿದ್ದುದನ್ನು ರಾಬರ್ಟ್ ಗಮನಿಸಿದ. ಕೆಲಸವಿಲ್ಲದೆ ಅಲೆದಾಡುತ್ತಿದ್ದ ಆತ, ನೀವು ಒಂದಿಷ್ಟು ದುಡ್ಡು ಕೊಡುವುದಾದರೆ ನಿಮ್ಮ ಪರವಾಗಿ ನಾನು ಸರದಿಯಲ್ಲಿ ನಿಲ್ಲುತ್ತೇನೆ ಎಂದು ಗ್ರಾಹಕರೊಬ್ಬರ ಮುಂದೆ ಪ್ರಸ್ತಾವ ಮುಂದಿಟ್ಟ. ಆತನ ಪರವಾಗಿ ಹದಿನೈದು ಗಂಟೆಗಳವರೆಗೆ ಐಫೋನ್ ಮಳಿಗೆ ಮುಂದೆ ಸರದಿಯಲ್ಲಿ ಕಾದಿದ್ದ ರಾಬರ್ಟ್‌ಗೆ 325 ಡಾಲರ್ (ಸರಿಸುಮಾರು ₹ 24 ಸಾವಿರ) ಬಂತು. ಅಷ್ಟೊಂದು ಹೊತ್ತು ಕಾದಿದ್ದರೂ ಆ ಗ್ರಾಹಕನಿಗೆ ಹೊಸ ಐಫೋನ್ ಸಿಗಲಿಲ್ಲ. ಬಳಿಕ ಆತ ಆನ್‌ಲೈನ್‌ನಲ್ಲಿ ಬುಕ್ ಮಾಡಿ ಖರೀದಿಸಿದ. ಒಪ್ಪಂದದಂತೆ ರಾಬರ್ಟ್‌ಗೆ ಹಣ ಸಂದಾಯ ಮಾಡಿದ. ಹತ್ತು ವರ್ಷಗಳ ಹಿಂದೆ ಹೀಗೆ ಶುರುವಾದ ರಾಬರ್ಟ್‌ನ ಬ್ಯುಜಿನೆಸ್ ಮುಂದೆ ‘ಸೇಮ್ ಓಲೆ ಲೈನ್ ಡ್ಯೂಡ್ಸ್’ (SOLD) ಕಂಪನಿ ತೆರೆಯುವ ಮಟ್ಟಕ್ಕೆ ಬೆಳೆಯಿತು.

ನ್ಯೂಯಾರ್ಕ್‌ನ ಸರದಿಗಳಲ್ಲಿ ಕಾಯಲಾರಂಭಿಸಿದ ಮೊದಲ ವೃತ್ತಿಪರ (ಲೈನ್ ಸಿಟ್ಟರ್) ಎಂಬ ಹಿರಿಮೆಗೆ ಒಳಗಾಗಿರುವ ರಾಬರ್ಟ್, ಇದೀಗ ಸುಮಾರು 30 ಜನ ಲೈನ್ ಸಿಟ್ಟರ್‌ಗಳನ್ನು ಹೊಂದಿರುವ ಕಂಪನಿಯ ಮಾಲೀಕ. ‘ಪ್ರತೀ ವಾರ ಸರದಿಯಲ್ಲಿ ಕಾಯಲು ಸರಾಸರಿ 15–20 ಬುಕ್ಕಿಂಗ್‌ಗಳು ಆಗುತ್ತವೆ. ಮೊದಲ ಎರಡು ಗಂಟೆಗಳ ಕಾಯುವಿಕೆಗೆ 50 ಡಾಲರ್ (₹ 3,700) ಚಾರ್ಜ್ ಮಾಡುತ್ತೇವೆ. ನಂತರದ ಪ್ರತೀ ಅರ್ಧಗಂಟೆಗೆ ಹತ್ತು ಡಾಲರ್‌ನಂತೆ (₹ 750) ದರ ವಿಧಿಸುತ್ತೇವೆ’ ಎನ್ನುತ್ತಾನೆ ರಾಬರ್ಟ್.

ನಮ್ಮ ಗರಿಗರಿ ಮಸಾಲೆ ದೋಸೆಯಂತೆ ಖರ್ಚಾಗುವ ನ್ಯೂಯಾರ್ಕ್‌ನ ಸುಪ್ರಸಿದ್ಧ ಡಾಮಿನಿಕ್ ಆನ್ಸೆಲ್‌ನ ಕ್ರೋನಟ್, ಸಂಗೀತ ಗೋಷ್ಠಿಗಳ ಟಿಕೆಟ್, ಶೂ, ಫೋನ್ ಖರೀದಿಯ ಸರದಿಗಳಲ್ಲದೆ ಕೊಲಂಬಿಯಾ ವಿಶ್ವವಿದ್ಯಾಲಯದ ಪದವಿ ಸಮಾರಂಭದ ಸಮಯದಲ್ಲಿ ಮುಂದಿನ ಸಾಲಿನ ಸೀಟು ಹಿಡಿದು ಕೊಡಲೂ ‘ಸೇಮ್ ಓಲೆ ಲೈನ್ ಡ್ಯೂಡ್ಸ್’ಗೆ ಬೇಡಿಕೆಗಳು ಬಂದಿವೆ.




ಐಫೋನ್‌ನ ಹೊಸ ಆವೃತ್ತಿ ಬಿಡುಗಡೆ ಆದಾಗಲೆಲ್ಲ ಡ್ಯೂಡ್‌ಗಳು ತುಂಬಾ ಬ್ಯುಸಿ ಆಗಿರುತ್ತಾರೆ. ಐಫೋನ್ 7 ಬಿಡುಗಡೆಯಾದಾಗ ಸರದಿಯಲ್ಲಿ ನಿಂತಿದ್ದಕ್ಕೆ ಈ ಕಂಪನಿಯ ಉದ್ಯೋಗಿಗಳು 14 ಸಾವಿರ ಡಾಲರ್ (₹ 10.35 ಲಕ್ಷ) ಸಂಪಾದನೆ ಮಾಡಿದ್ದರು!

ರಾಬರ್ಟ್‌ಗೆ ಒಮ್ಮೆ ತುಂಬಾ ವಿಚಿತ್ರವಾದ ಬೇಡಿಕೆ ಬಂದಿದ್ದಿದೆ. ಉಚಿತವಾಗಿ ಹಂಚುತ್ತಿದ್ದ ಮಕ್ಕಳ ಸಾಮಗ್ರಿಯನ್ನು ಪಡೆಯಲು ಸರದಿಯಲ್ಲಿ ನಿಲ್ಲಬೇಕೆಂಬ ಬೇಡಿಕೆ ಅದು. ಮೂರು ಗಂಟೆಗಳವರೆಗೆ ಸರದಿಯಲ್ಲಿ ನಿಂತಿದ್ದಕ್ಕೆ ಆತನಿಗೆ 65 ಡಾಲರ್ ಸಿಕ್ಕಿತು. ಅದೇ ಸಾಮಗ್ರಿ ಬೇಕೆಂದು ಹಟ ಹಿಡಿದಿದ್ದ ಮಗನಿಗೆ ಅದನ್ನು ಕೊಡಿಸಿದ ತೃಪ್ತಿ ಆ ಮಗುವಿನ ತಂದೆ–ತಾಯಿಯದ್ದಾಗಿತ್ತು. ಇಂತಹ ರಸವತ್ತಾದ ಕಥೆಗಳ ಕಣಜ ರಾಬರ್ಟ್. ಬಿಸಿಲು ಇರಲಿ, ಮಂಜು ಸುರಿಯುತ್ತಿರಲಿ, ಮಳೆ ಬರುತ್ತಿರಲಿ ಸರದಿಯಿಂದ ಈ ಡ್ಯೂಡ್‌ಗಳು ಕಾಲು ಕೀಳುವುದಿಲ್ಲ. ಪ್ರತಿಕೂಲ ಹವಾಮಾನದಲ್ಲಿ ಕಾಯುವುದಾದರೆ ಹೆಚ್ಚಿನ ಡಾಲರ್‌ಗಳು ಸಿಗುತ್ತವೆ ಎನ್ನುವ ಖುಷಿ ಅವರಿಗೆ.

ದಿನಗಟ್ಟಲೆ ನಿಲ್ಲುವ ಪ್ರಮೇಯ ಬಂದಾಗ ಕೆಲವೊಮ್ಮೆ ಗ್ರಾಹಕರೇ ಇವರಿಗೆ ಊಟ ತಂದು ಕೊಡುವುದಿದೆ. ಕೆಲವೊಂದು ಕಡೆ ಕಾಯುವ ವಾತಾವರಣ ಅಷ್ಟೊಂದು ಚೆನ್ನಾಗಿರದೆ ತೊಂದರೆ ಅನುಭವಿಸುವುದೂ ಇದೆ. ಸರದಿಯಲ್ಲಿ ನಿಂತ ಅಕ್ಕಪಕ್ಕದವರ ವಿಶ್ವಾಸ ಗಳಿಸಿ, ನೈಸರ್ಗಿಕ ಕರೆಗಳಿಗೆ ಓಗೊಟ್ಟು ಬರಬೇಕಾಗುತ್ತದೆ. ಅದಕ್ಕಾಗಿ ರಾಬರ್ಟ್‌ನ ಡ್ಯೂಡ್‌ಗಳು ‘ಟಾಯ್ಲೆಟ್ ಫೈಂಡರ್ ಆ್ಯಪ್’ ಹಾಕಿಕೊಂಡಿದ್ದಾರೆ. ಯಾವ ಪ್ರದೇಶದಲ್ಲಿ ಕಾಯಬೇಕಾಗಿದೆಯೋ ಆ ಪ್ರದೇಶದ ಸುತ್ತಲಿನ ಸಾರ್ವಜನಿಕ ಟಾಯ್ಲೆಟ್‌ಗಳನ್ನು ಆ್ಯಪ್ ಹುಡುಕಿಕೊಡುತ್ತದೆ. ವಿದ್ಯಾರ್ಥಿಗಳು, ಮಹಿಳೆಯರು, ಹಿರಿಯ ನಾಗರಿಕರು ಈ ಕಂಪನಿಯ ಡ್ಯೂಡ್‌ಗಳಾಗಿ ಕೆಲಸ ಮಾಡುತ್ತಾರೆ. ರಾಬರ್ಟ್, ತನ್ನ ಹೊಟ್ಟೆ ತುಂಬಿಸಿಕೊಂಡಿದ್ದಲ್ಲದೆ ಇನ್ನೂ ಹತ್ತಾರು ಹಸಿದ ಹೊಟ್ಟೆಗಳಿಗೂ ಈಗ ಅನ್ನದಾತ.

ನಮ್ಮ ಬೆಂಗಳೂರಿನ ಶ್ರೀರಾಂಪುರ, ಸುಂಕದಕಟ್ಟೆ ಅಥವಾ ಚಾಮರಾಜನಗರದ ಯಾವುದೇ ಹಳ್ಳಿಯ ರೇಷನ್ ಅಂಗಡಿ ಮುಂದೆ ಸರದಿ ನಿಂತ ನಮ್ಮ ಬೋರೇಗೌಡನಿಗೆ ಈ ಕಥೆ ಹೇಳಿದರೆ, ‘ಕಾಯುವುದಕ್ಕೆ ಯಾಕೆ ದುಡ್ಡು ಕೊಡಬೇಕು? ಸರದಿಯಲ್ಲಿ ಒಂದು ಚಪ್ಪಲಿ ಬಿಟ್ಟರೆ ಸಾಕು, ನಮ್ಮ ಪಾಳಿ ಬರುವವರೆಗೆ ಆ ಚಪ್ಪಲಿ ತಂತಾನೆ ಮುಂದೆ ಹೋಗುತ್ತೆ’ ಅಂದಾನು! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65